# ಶೆರಪೋವ ಪಾಠ

ಐದು ಬಾರಿ ಗ್ರ್ಯಾನ್ ಪ್ರಿ ಚಾಂಪಿಯನ್ ಆಗಿರುವ, ಒಟ್ಟು 35 ಟೆನಿಸ್ ಪ್ರಶಸ್ತಿಗಳ ವಿಜೇತೆ ಮರಿಯಾ ಶೆರಪೋವ ಈಗ ಸುದ್ದಿಯಲ್ಲಿರುವುದು ಟೆನಿಸ್ ಕೋರ್ಟ್‌ನ ಒಳಗಿನ ಗದ್ದಲಕ್ಕಾಗಿ ಅಲ್ಲ; ಬದಲಾಗಿ ಟೆನಿಸ್ ಕೋರ್ಟ್ ಹೊರಗಿನ ರಿಯಲ್ ಎಸ್ಟೇಟ್ ಹಗರಣಕ್ಕಾಗಿ— ಅದೂ ಭಾರತದಲ್ಲಿ. 30ರ ಹರೆಯದ ಈ ರಷ್ಯನ್ ಸುಂದರಿ, ಬಹುಶಃ ಸ್ಟೆಫಿ ಗ್ರಾಫ್‌ಳನ್ನು ಬಿಟ್ಟರೆ ಜಗತ್ತಿನ ಅತ್ಯಂತ ಸುಂದರಿ ಟೆನಿಸ್ ಆಟಗಾರ್ತಿ ಎಂದೇ ಖ್ಯಾತಿ ಪಡೆದವಳು. ಆದರೆ ಈಗ ದೆಹಲಿಯಲ್ಲಿ ಈಕೆಯ ಮೇಲೆ ಕ್ರಿಮಿನಲ್ ಸಂಚು ಮತ್ತು ವಂಚನೆಯ ಮೊಕದ್ದಮೆ ದಾಖಲಾಗಿದೆ. ದೆಹಲಿಯ ಉಪನಗರ ಗುರ್‌ಗಾಂವ್‌ನಲ್ಲಿ ಲಕ್ಸುರಿ ಅಪಾರ್ಟ್‌ಮೆಂಟ್ ಕಟ್ಟಿಸಿಕೊಡುವುದಾಗಿ ಸಾರ್ವಜನಿಕರಿಂದ ಕೋಟ್ಯಂತರ ರೂಪಾಯಿ ಹಣ ಕಟ್ಟಿಸಿಕೊಂಡ ಹೋಮ್‌ಸ್ಟೆಡ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಸಂಸ್ಥೆ, 2016ರಲ್ಲೇ ತನ್ನ ನಿರ್ಮಾಣ ಕಾರ್ಯವನ್ನು ಮುಗಿಸಬೇಕಿತ್ತು. ಆದರೆ ಯೋಜನೆ ಅದಾಗಲೇ ಅರ್ಧದಲ್ಲಿ ಸ್ಥಗಿತಗೊಂಡಿದೆ. ಹಣ ಹೂಡಿಕೆ ಮಾಡಿದವರಿಗೆ ಸಂಸ್ಥೆಯ ಅಧಿಕಾರಿಗಳೂ ಕೈಗೆ ಸಿಗುತ್ತಿಲ್ಲ. ಹೀಗೆ ಹಣ ಕೊಟ್ಟು ಕಾಯುತ್ತಿರುವ ಒಬ್ಬ ಗ್ರಾಹಕ ಪೊಲೀಸರಿಗೆ ದೂರು ಕೊಟ್ಟಿದ್ದು, ವಕೀಲರ ಮೂಲಕ ಮರಿಯಾಗೆ ನೋಟಿಸ್ ಕಳಿಸಿದ್ದಾರೆ.

ಈ ಕಟ್ಟಡ ನಿರ್ಮಾಣ ಸಂಸ್ಥೆ ಐದು ವರ್ಷಗಳ ಹಿಂದೆ ತನ್ನ ಲಕ್ಸುರಿ ಗೃಹನಿರ್ಮಾಣ ಯೋಜನೆಯನ್ನು ಆರಂಭಿಸಿದಾಗ, ಮರಿಯಾ ಶರಪೋವಳ ಫೋಟೊ ಬಳಸಿಕೊಂಡಿತ್ತು. ಸ್ವತಃ ಮರಿಯಾ ಗ್ರಾಹಕರನ್ನು ಈ ಫ್ಲ್ಯಾಟ್‌ಗಳ ಖರೀದಿಗೆ ಮನವಿ ಮಾಡುವ ಜಾಹೀರಾತುಗಳಲ್ಲಿ ಮಿಂಚಿದ್ದಳು. ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರತ್ಯಕ್ಷವಾಗಿದ್ದ ಮರಿಯಾ, ಈ ಗಗನಚುಂಬಿ ಕಟ್ಟಡದಲ್ಲಿ ಟೆನಿಸ್ ಅಕಾಡೆಮಿ, ಕ್ಲಬ್ ಹೌಸ್ ಮತ್ತು ಹೆಲಿಪ್ಯಾಡ್ ಗಳು ಇರಲಿವೆ ಎಂದು ಭರವಸೆ ನೀಡಿದ್ದಳು. ವಸತಿ ಸಂಕೀರ್ಣದ ಹೆಸರು 'ಬ್ಯಾಲೆಟ್ ಬೈ ಶೆರಪೋವ' ಎಂದೇ ಇಡಲಾಗಿತ್ತು.

ಸಹಜವಾಗಿಯೇ ಜನರು ಶೆರಪೋವ ಹೆಸರು ನೋಡಿಕೊಂಡೇ ಈ ಫ್ಲ್ಯಾಟ್ ಖರೀದಿಗೆ ಹಣ ಹೂಡಿದ್ದಾರೆ. 2012ರಲ್ಲಿ ಶೆರಪೋವ ಖುದ್ದಾಗಿ ಗುದ್ದಲಿ ಪೂಜೆಗೆ ದೆಹಲಿಗೆ ಬಂದು ಹೋಗಿದ್ದು ಕೂಡಾ ಜನರ ಭರವಸೆಯನ್ನು ಹೆಚ್ಚಿಸಿತ್ತು. ಈ ಯೋಜನೆಯನ್ನು ಸ್ಪೆಷಲ್ ಮತ್ತು ಡಿಫರೆಂಟ್ ಎಂದು ಬಣ್ಣಿಸಿದ್ದ ಶೆರಪೋವ ಈಗ ಯೋಜನೆ ನೆನೆಗುದಿಗೆ ಬಿದ್ದಿರುವಾಗ, ದೆಹಲಿಯತ್ತ ತಿರುಗಿಯೂ ನೋಡುತ್ತಿಲ್ಲ. ಕಾನೂನಿನ ಪ್ರಕಾರ, ಯಾವುದೇ ಯೋಜನೆಗೆ 'ಬ್ರ್ಯಾಂಡ್ ಅಂಬಾಸಿಡರ್' ಆಗುವ ಯಾವುದೇ ಸೆಲೆಬ್ರಿಟಿ ಯೋಜನೆಯ ಏಜೆಂಟ್ ಕೂಡಾ ಆಗಿರುತ್ತಾರೆ. ಈ ಯೋಜನೆಯಲ್ಲಿ ಬಹುಶಃ ಶೆರಪೋವ ಹೆಸರು ಇಲ್ಲವಾಗಿದ್ದಲ್ಲಿ ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನ ಫ್ಲ್ಯಾಟ್ ಖರೀದಿಗೆ ಹಣ ಕಟ್ಟುತ್ತಿರಲಿಲ್ಲ ಎನ್ನುವುದೂ ನಿಜ.

ಒಂದು ಕಾಲದ ಜಾಗತಿಕ 'ನಂಬರ್ ಒನ್' ಟೆನಿಸ್ ತಾರೆ ಶೆರಪೋವ, 2016ರಲ್ಲಿ 'ಫೋರ್ಬ್ಸ್' ಪಟ್ಟಿಯ ಪ್ರಕಾರ, 30 ದಶಲಕ್ಷ ಡಾಲರ್ ಆದಾಯ ಗಳಿಸಿದ್ದಾಳೆ. ಅದರಲ್ಲಿ ಸುಮಾರು 23 ದಶಲಕ್ಷ ಡಾಲರ್ ಬಂದಿರುವುದೇ ಈ ರೀತಿಯ ಕಂಪೆನಿ ಜಾಹೀರಾತುಗಳಿಂದ. ಗುರ್‌ಗಾಂವ್‌ನ ಈ ವಸತಿ ಯೋಜನೆಯವರು ಶೆರಪೋವ 'ಬ್ರ್ಯಾಂಡ್ ಅಂಬಾಸಿಡರ್' ಆಗುವುದಕ್ಕೆ ಎಷ್ಟು ದುಡ್ಡು ಕೊಟ್ಟಿದ್ದಾರೋ ಗೊತ್ತಿಲ್ಲ. ಆದರೆ ಈಗ ದೆಹಲಿ ಕೋರ್ಟ್‌ನಲ್ಲಿ ವಂಚನೆಯ ಮೊಕದ್ದಮೆ ದಾಖಲಾಗಿರುವುದರಿಂದ ಶೆರಪೋವ ತೊಂದರೆಗೆ ಸಿಕ್ಕಿಕೊಳ್ಳುವುದಂತೂ ಖಂಡಿತ.

ಹಾಗೆ ನೋಡಿದರೆ ಶೆರಪೋವಗೆ ವಿವಾದಗಳು ಹೊಸತಲ್ಲ. ಕಳೆದ ವರ್ಷ ಉದ್ದೀಪನಾ ಮದ್ದು ಸೇವಿಸಿದ ಆರೋಪದಲ್ಲಿ ಈಕೆಯನ್ನು ಅಂತರರಾಷ್ಟ್ರೀಯ ಟೆನಿಸ್ ಫೆಡರೇಶನ್ 2 ವರ್ಷಗಳ ಅವಧಿಗೆ ಟೆನಿಸ್ ಅಂಕಣದಿಂದ ಅಮಾನತುಗೊಳಿಸಿತ್ತು. ಮೆಲ್ಡೋನಿಯಂ ಎಂಬ ಹೃದಯದ ಚೇತರಿಕೆಗೆ ಸಂಬಂಧಿಸಿದ ಔಷಧಿಯನ್ನು ಶೆರಪೋವ ಎರಡು ವರ್ಷಗಳಿಂದ ಸೇವಿಸುತ್ತಿದ್ದುದು, ಮಾರ್ಚ್‌ನಲ್ಲಿ ಫೆಡರೇಶನ್ ನಡೆಸಿದ ಪರೀಕ್ಷೆಯಲ್ಲಿ ಪತ್ತೆಯಾಗಿತ್ತು. ಈ ಮದ್ದನ್ನು ಜನವರಿಯಿಂದಲೇ ನಿಷೇಧಿಸಿ ಫೆಡರೇಷನ್ ಆದೇಶ ಹೊರಡಿಸಿತ್ತು. ಆದರೆ ತನಿಖೆಯ ವೇಳೆ, ಶೆರಪೋವ ಈ ಔಷಧಿಯನ್ನು ಉತ್ತೇಜನಕ್ಕಾಗಿ ಉದ್ದೇಶಪೂರ್ವಕವಾಗಿ ಸೇವಿಸಿದ್ದು ಅಲ್ಲವೆಂದೂ, ಸಹಜವಾಗಿ ರಕ್ತ ಪರಿಚಲನೆಯ ವೇಗವನ್ನು ಹೆಚ್ಚಿಸಲು ಸೇವಿಸುತ್ತಿದ್ದಳೆಂದೂ ಸಮಿತಿ ಅಭಿಪ್ರಾಯಪಟ್ಟಿತ್ತು. ಒಂದು ವೇಳೆ ಉದ್ದೇಶಪೂರ್ವಕವಾಗಿ ಉದ್ದೀಪನೆಗಾಗಿ ಈ ಔಷಧಿ ಸೇವಿಸಿದ್ದೆಂದು ಸಾಬೀತಾಗಿದ್ದರೆ, ಶೆರಪೋವಾಗೆ ನಾಲ್ಕು ವರ್ಷಗಳ ಅಮಾನತು ಶಿಕ್ಷೆ ಸಿಗುತ್ತಿತ್ತು.

1994ರಿಂದ ಅಮೆರಿಕ ಪ್ರಜೆಯಾಗಿರುವ ಶೆರಪೋವ, ಗ್ರ್ಯಾನ್‌ಸ್ಲಾಮ್ ವಿಜೇತೆಯ ಸಾಧನೆ ಮಾಡಿರುವ ಏಕೈಕ ರಷ್ಯನ್. 2005ರಿಂದ 2012ರವರೆಗೆ ಐದು ಪ್ರತ್ಯೇಕ ಅವಧಿಯಲ್ಲಿ ಒಟ್ಟು 21 ವಾರಗಳ ಕಾಲ ಆಕೆ ವಿಶ್ವದ 'ನಂಬರ್ ಒನ್' ಸ್ಥಾನವನ್ನು ಗಳಿಸಿದ್ದುದು ವಿಶೇಷ. 2012ರ ಬೇಸಿಗೆ ಒಲಿಂಪಿಕ್ಸ್‌ನಲ್ಲಿ ಈಕೆ ಬೆಳ್ಳಿ ಪದಕ ಗೆದ್ದಿದ್ದಳು. ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಅನ್ನು ಎರಡು ಬಾರಿ ಗೆದ್ದಿದ್ದರೆ, ಆಸ್ಟ್ರೇಲಿಯನ್, ಯುಎಸ್ ಓಪನ್ ಮತ್ತು ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಅನ್ನು ತಲಾ ಒಂದು ಬಾರಿ ಗೆದ್ದಿರುವ ಶೆರಪೋವ, 2005ರಿಂದ 2015ರವರೆಗೆ ಪ್ರತಿವರ್ಷವೂ ಒಂದಲ್ಲ ಒಂದು ಟೆನಿಸ್ ಪ್ರಶಸ್ತಿಯನ್ನು ಗೆದ್ದ ದಾಖಲೆ ಹೊಂದಿದ್ದಾಳೆ.

ಶೆರಪೋವ ಅತ್ಯಂತ ಆಕ್ರಮಣಕಾರಿ ಬೇಸ್‌ಲೈನ್ ಆಟಕ್ಕೆ ಹೆಸರುವಾಸಿ. ಮುಂಗೈ ಮತ್ತು ಹಿಂಗೈ ಹೊಡೆತಗಳ ವೇಗ ಮತ್ತು ಕರಾರುವಾಕ್ ಗುರಿ ಈಕೆಯ ಹೆಗ್ಗಳಿಕೆ. ಆದರೆ ಪದೇ ಪದೇ ಗಾಯಗೊಳ್ಳುವುದು ಮತ್ತು ಅಂಕಣದಿಂದ ಹೊರಕ್ಕೆ ಬೀಳುವುದು ಈಕೆಯ ವೃತ್ತಿಜೀವನದಲ್ಲಿ ಮಾಮೂಲು ಎಂಬಂತಾಗಿದೆ. 2013ರಲ್ಲಂತೂ ಗಾಯಗೊಂಡು ಒಂದು ವರ್ಷ ಕಣದಿಂದ ಹೊರಗಿದ್ದಳು. ಕಳೆದ ವರ್ಷ ಉದ್ದೀಪನಾ ಮದ್ದು ಸೇವಿಸಿದ ತಪ್ಪಿಗೆ ಶಿಕ್ಷೆಯಾಗಿ ಒಂದೂವರೆ ವರ್ಷ ಹೊರಗಿದ್ದಳು. ಈಗ ಕ್ರಿಮಿನಲ್ ಸಂಚು ಮತ್ತು ವಂಚನೆಯ ಆರೋಪ ಕೋರ್ಟ್‌ನಲ್ಲಿ ಸಾಬೀತಾದರೆ ಎಷ್ಟು ವರ್ಷ (ಜೈಲಿನ) ಒಳಗಿರುತ್ತಾಳೋ ನೋಡಬೇಕು. ಗ್ರಾಹಕ ಉತ್ಪನ್ನಗಳ ಜಾಹೀರಾತುಗಳನ್ನು ಭಾರೀ ಹಣದ ಆಸೆಗೆ ಸಾರಾಸಗಟಾಗಿ ಒಪ್ಪಿಕೊಳ್ಳುವ ಸೆಲೆಬ್ರಿಟಿಗಳಿಗೆ ಶೆರಪೋವ ಪ್ರಕರಣದಲ್ಲಿ ಪಾಠವೊಂದಿದೆ ಎನ್ನುವುದಂತೂ ನಿಜ.



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65